

ಮುಂದೆ ಕೈ ಬೆರಳುಗಳನ್ನು ಆಡಿಸುವುದರಿಂದ ತನ್ನಿಂದ ಒಂದು ಬಗೆಯ ಶಕ್ತಿಯು ರೋಗಿಯ ದೇಹದೊಳಕ್ಕೆ ಹರಿಯುತ್ತದೆ. ರೋಗಲಕ್ಷಣ ಮುಖ್ಯವಾಗಿ ನೋವು ತಗ್ಗುತ್ತದೆ ಎಂದು ಪ್ರತಿಪಾದಿಸಿದ. ಒಂದು ಫ್ರೆಂಚ್ ಸಮಿತಿಯು ಇವನ ಈ ಸಿದ್ಧಾಂತವನ್ನು ಪರಿಶೀಲಿಸಿ. ಇವನಲ್ಲಿ ಅಂತಹ ವಿಶೇಷ ಶಕ್ತಿ ಏನೂ ಇಲ್ಲ ಎಂದು ಹೇಳಿತು. ನಂಬಿಕೆ ಮತ್ತು ಮನೋಸೂಚನೆಯಿಂದ ಕೆಲವು ರೋಗಿಗಳ ನೋವು ಕಡಿಮೆಯಾಯಿತು ಅಷ್ಟೆ ಎಂದಿತು. ಆದರೆ ಮೆಸ್ಮರ್ ತನ್ನ ಕೈಚಲನೆಯ ಚಿಕಿತ್ಸೆಯನ್ನು ಮುಂದುವರೆಸಿದ. ಅದನ್ನು 'ಮೆಸ್ಮರಿಸಮ್' ಎಂದು ಕರೆಯಲಾಯಿತು. ಉನ್ಮಾದ (ಹಿಸ್ಟೀರಿಯಾ) ರೋಗಿಗಳ ಕೆಲವು ರೋಗಲಕ್ಷಣಗಳು ಈ ಮೆಸ್ಮರಿಸಮ್‌ಗೆ ಸ್ಪಂದಿಸುತ್ತವೆ ಎಂದು ಮನಃಶಾಸ್ತ್ರಜ್ಞರು ಅಭಿಪ್ರಾಯಪಟ್ಟರು.

ಹೀಗೆ ಹಿಪ್ನೋಸಿಸ್ ಪ್ರಪಂಚದಾದ್ಯಂತ ವೈದ್ಯರನ್ನು, ಮನಃಶಾಸ್ತ್ರಜ್ಞರನ್ನು, ಜನ ಸಾಮಾನ್ಯರನ್ನು, ಸಾಹಿತಿಗಳನ್ನು ಅಂದಿನಿಂದ ಇಂದಿನವರೆಗೆ ಆಕರ್ಷಿಸುತ್ತಲೇ ಉಳಿದಿದೆ. ಹಿಪ್ನೋಸಿಸ್ ಬಗ್ಗೆ ಸಾಕಷ್ಟು ಅಧ್ಯಯನಗಳನ್ನು ಮಾಡಲಾಗಿದೆ. ಅದರ ಉಪಯುಕ್ತತೆ, ವೈಜ್ಞಾನಿಕತೆ ಬಗ್ಗೆ ವಾದ–ವಿವಾದಗಳ ರಾಶಿಯೇ ಇದೆ. ಹಿಪ್ನೋಸಿಸ್ ಒಂದು ಮಿಥ್ಯೆ, ನಿರುಪಯೋಗಿ ಎಂದು ಕೆಲವರು ಹೇಳಿದರೆ, ಹಿಪ್ನೋಸಿಸ್ ಪರಿಣಾಮಕಾರಿ, ಉಪಯುಕ್ತ ಎಂದು ಕೆಲವರು ಬಲವಾಗಿ ನಂಬುತ್ತಾರೆ. ತಮ್ಮದೇ ಸಂಘಗಳನ್ನು ಮಾಡಿಕೊಂಡು ತಮ್ಮ ನಂಬಿಕೆಗಳನ್ನು ಪ್ರತಿಪಾದಿಸುತ್ತಲೇ ಇದ್ದಾರೆ. ಹಿಪ್ನೋಸಿಸ್ ತರಬೇತಿ ಕೇಂದ್ರಗಳನ್ನು ನಡೆಸುತ್ತಿದ್ದಾರೆ.

## ಯಾರು ಸಮ್ಮೋಹನಕ್ಕೆ ಒಳಗಾಗುತ್ತಾರೆ?

ಎಲ್ಲರನ್ನೂ ಸಮ್ಮೋಹನಕ್ಕೆ ಒಳಪಡಿಸಲು ಸಾಧ್ಯವಿಲ್ಲ ಎಂಬುದು ಗಮನಾರ್ಹ. ಹೈಸಜೆಸ್ಟಿಬಿಲಿಟಿ: ಯಾರು ಬೇರೆಯವರು ಹೇಳುವುದನ್ನು ಮರು ಪ್ರಶ್ನೆ ಮಾಡದೇ ಕೇಳಿಸಿಕೊಳ್ಳುತ್ತಾರೋ. ಹೇಳಿದಂತೆ ಮಾಡುತ್ತಾರೋ, ಸೂಚಿಸಿದಂತೆ ಆಲೋಚಿಸುತ್ತಾರೋ, ಅನುಕರಿಸುತ್ತಾರೋ ಅವರನ್ನು ಮಾತ್ರ ಹಿಪ್ನೋಟೈಸ್ ಮಾಡಬಹುದು. ದೃಢ ಮನಸ್ಕರನ್ನು, ಪ್ರಶ್ನೆ ಮಾಡುವವರನ್ನು, ವಿರೋಧಿಸುವವರನ್ನು ಹಿಪ್ನೋಟೈಸ್ ಮಾಡಲು ಸಾಧ್ಯವಿಲ್ಲ. ಇತರರ ಸಲಹೆ ಸೂಚನೆಗಳನ್ನು ಶಿರಸಾವಹಿಸಿ ಪಾಲಿಸುವವರನ್ನು 'ಹೈಸಜೆಸ್ಟಿಬಿಲಿಟಿ ವ್ಯಕ್ತಿ'ಗಳೆಂದು ಕರೆಯಲಾಗುತ್ತದೆ. ಇವರಿಗೆ ಹಿಪ್ನೋಸಿಸ್ ಅನ್ವಯವಾಗುತ್ತದೆ. ಜನಸಂಖ್ಯೆಯ ಶೇ. 50 ರಷ್ಟು ಜನ ಇವರಲ್ಲಿ ಬರುತ್ತಾರೆ. ಸಮ್ಮೋಹನ ಸ್ಥಿತಿಯಲ್ಲಿ ಸಮ್ಮೋಹಕನು ಹೇಳಿದ್ದನ್ನು ನಂಬುತ್ತಾರೆ. ಅವನು ಸೂಚಿಸಿದ ವಿಷಯ– ವಸ್ತುವನ್ನು ಕುರಿತೇ ಆಲೋಚಿಸುತ್ತಾರೆ. ಅವನು ಹೇಳಿದಂತೆಯೇ ಮಾಡುತ್ತಾರೆ. ಅವರ ಪಂಚೇಂದ್ರಿಯಗಳನ್ನು, ಮನಸ್ಸಿನ ಒಂದು ಭಾಗವನ್ನು ಸಮ್ಮೋಹಕ ತನ್ನ ವಶಕ್ಕೆ ತೆಗೆದುಕೊಳ್ಳುತ್ತಾನೆ. ವ್ಯಕ್ತಿಯ ಕ್ರಿಯೆ– ಪ್ರತಿಕ್ರಿಯೆಗಳು ಸಮ್ಮೋಹಕನ ನಿಯಂತ್ರಣ, ನಿರ್ದೇಶನಕ್ಕೆ ಒಳಪಡುತ್ತದೆ. ದುಷ್ಟಬುದ್ಧಿಯ ಸಮ್ಮೋಹಕನು ವ್ಯಕ್ತಿಯ ದುರ್ಬಳಕೆ ಮತ್ತು ಶೋಷಣೆಯನ್ನು ಮಾಡಬಹುದು. ಸಮ್ಮೋಹನ ಚಿಕಿತ್ಸೆಗೆ ಸಾವಿರಾರು ರೂಪಾಯಿಗಳ ಫೀಸನ್ನು ವಸೂಲು ಮಾಡಬಹುದು.

ಗಂಡಸರಿಗಿಂತ ಹೆಂಗಸರು ಹೆಚ್ಚಾಗಿ ಸಮ್ಮೋಹನಕ್ಕೆ ಒಳಗಾಗುತ್ತಾರೆ. 'ಬೇರೆಯವರು ಹೇಳಿದಂತೆ ನೀನು ಕೇಳಬೇಕು' ಎಂಬ ತರಬೇತಿಯೇ ಇದಕ್ಕೆ ಕಾರಣ!

## ವ್ಯಕ್ತಿಯನ್ನು ಸಮ್ಮೋಹನಕ್ಕೆ ಒಳಪಡಿಸುವ ವಿಧಿ-ವಿಧಾನ

ಶಾಂತವಾದ ಕೋಣೆ. ಮಂದಬೆಳಕು. ಸಮ್ಮೋಹಕನ ಮುಂದೆ ವ್ಯಕ್ತಿ ಕುಳಿತುಕೊಳ್ಳಬಹುದು ಅಥವಾ ಮಲಗಬಹುದು. ಸಮ್ಮೋಹಕನ ಮುಖದ ಮೇಲೆ ಬೆಳಕಿದ್ದು, ಅವನನ್ನು, ಅವನ ಕೈ ಚಲನೆಯನ್ನು ವ್ಯಕ್ತಿ